
# ಶ್ರೀರಾಮಕೃಷ್ಣರು ಮತ್ತು ಭಾರತೀಯ ಧರ್ಮಪ್ರಜ್ಞೆ

ಸ್ವಾಮಿ ಜಗದಾತ್ಮಾನಂದ

### ನವಯುಗದ ಸಚೇತನ ಭಾಷ್ಯ

**ಪ್ರ**ಪಂಚದ ವಿಭಿನ್ನ ಮತಗಳಲ್ಲಿ ಸನಾತನ ಧರ್ಮ ಅಥವಾ ಹಿಂದೂಧರ್ಮ ಅತ್ಯಂತ ಪುರಾತನವಾದದ್ದೆಂಬುದು ಸರ್ವವಿದಿತ. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲದಲ್ಲಿ ವಿಭಿನ್ನ ಜನಾಂಗಗಳ ದೈವೀ ತೃಷೆಯ ತೃಪ್ತಿಗಾಗಿ ಮತಗಳ ಉದ್ಭವವಾಯಿತೆಂಬುದನ್ನು ಕಾಣುತ್ತೇವೆ. ಸಾವಿರಾರು ವರ್ಷಗಳಿಂದ ನಮ್ಮ ಸನಾತನ ಧರ್ಮವು ಜನರಿಗೆ ಉದಾತ್ತ ಜೀವನ ನಡೆಸಲು ಅತ್ಯುನ್ನತ ಆದರ್ಶಗಳನ್ನು ಒದಗಿಸಿದೆ. ಕಷ್ಟ–ನಷ್ಟಗಳ ಸಂದರ್ಭದಲ್ಲಿ, ವಿಭಿನ್ನ ಜಾತಿಮತಗಳ ಸಂಘರ್ಷದಲ್ಲಿ, ಸಮಾಜದ ಅಡಿಪಾಯ ಕುಸಿಯದಂತೆ ಸ್ಥೈರ್ಯ, ಶಾಂತಿಗಳನ್ನು ಅದು ಕರುಣಿಸಿದೆ. ಶ್ರದ್ಧಾಭಕ್ತಿಗಳಿಂದ ಈ ಧರ್ಮದ ಮರ್ಮವನ್ನು ತಿಳಿಯಲು ಯತ್ನಿಸಿದವರಿಗೆ ಮೇಲಿನ ಮಾತು ಸ್ಪಷ್ಟವಾಗಿ ಅರ್ಥವಾಗುತ್ತದೆ. ಸನಾತನ ಧರ್ಮದ ಮೂಲಭೂತ ಆಧ್ಯಾತ್ಮಿಕ ತತ್ತ್ವಗಳು, ಅದರ ವಿಶಾಲತೆ ಮತ್ತು ಉದಾರ ಭಾವನೆಗಳು ಸುಸಂಸ್ಕೃತರೂ, ವಿದ್ಯಾ ಬುದ್ಧಿ ಸಂಪನ್ನರೂ ಆದ ವಿದೇಶೀಯರನ್ನೂ ಆಕರ್ಷಿಸಿವೆ. ಮ್ಯಾಕ್ಸ್ ಮುಲ್ಲರ್, ಡಾಯ್ಸನ್ ಮೊದಲಾದ ಹಲವಾರು ವಿದ್ವಾಂಸರು ನಮ್ಮ ದೇಶದ ಧಾರ್ಮಿಕ ಪರಂಪರೆಯನ್ನು ಶ್ರದ್ಧೆಯಿಂದ, ನಿಷ್ಪಕ್ಷಪಾತ ದೃಷ್ಟಿಯಿಂದ ಅಧ್ಯಯನ ಮಾಡಿದರು. ಅವರ ಗೌರವಪೂರಿತ ಭಾವನೆಗಳು ಈ ಧರ್ಮದ ಮೇಲಿನ ನಮ್ಮ ವಿಶ್ವಾಸ, ಪ್ರೀತಿಗಳನ್ನು ಹೆಚ್ಚಿಸುತ್ತವೆ.



ಅನಾದಿಕಾಲದಿಂದಲೂ ನಮ್ಮ ಶಾಸ್ತ್ರಗಳು ಸಾರುವ ತತ್ತ್ವವನ್ನು ಅರಿತು, ಜೀವನದಲ್ಲಿ ಅನುಷ್ಠಾನ ಮಾಡಿ ಅರಗಿಸಿಕೊಂಡು, ಸತ್ಯಸಾಕ್ಷಾತ್ಕಾರವನ್ನು ಪಡೆದ ಮಹಾನುಭಾವರು ಆಗಿಹೋಗಿದ್ದಾರೆ. ಇವರನ್ನು ನಾವು ಋಷಿಗಳು, ಮಂತ್ರದ್ರಷ್ಟಾರರು, ಜೀವನ್ಮುಕ್ತರು, ಮಹಾತ್ಮರು, ಸಿದ್ಧರು, ಯೋಗಿಗಳು ಎಂದೆಲ್ಲ ಕರೆಯುತ್ತೇವೆ. ವೈದಿಕ ಯುಗದಿಂದ ಪ್ರಾರಂಭಿಸಿ ಇಂದಿನವರೆಗಿನ ಇತಿಹಾಸದಲ್ಲಿ ಯಥಾರ್ಥ ಧಾರ್ಮಿಕ ಜೀವನವನ್ನು ಬಾಳಿದ, ಆತ್ಮಾನುಭೂತಿಯನ್ನು ಹೊಂದಿದ ಅಂಥ ಮಹಾನುಭಾವರುಗಳೇ ಸನಾತನಧರ್ಮ ಮತ್ತು ಸಂಸ್ಕೃತಿಯ ರಕ್ಷಕರಾಗಿ, ಜೀವನಯಾತ್ರೆಯಲ್ಲಿ ಶ್ರೇಯಸ್ಸಿನ ಮಾರ್ಗದರ್ಶಕರಾಗಿ ರಾರಾಜಿಸಿದ್ದಾರೆ. ನಮ್ಮ ದೇಶದ ಜನರಲ್ಲಿ ಧಾರ್ಮಿಕ ವಿಶ್ವಾಸ ರೂಢಮೂಲವಾಗುವುದಕ್ಕೆ ಅವರ ಶಕ್ತಿ, ಭಕ್ತಿ, ವಿರಕ್ತಿ, ನೈರ್ಮಲ್ಯಗಳೇ ಕಾರಣ. ಬೇರೆ ಬೇರೆ ಸಮಯಗಳಲ್ಲಿ ಉದಯಿಸಿದ ಅವರ ಉಪದೇಶಗಳಲ್ಲಿ ಜನರ ಯೋಗ್ಯತೆ, ಸಂಶಯ ಮತ್ತು ಸಮಸ್ಯೆಗಳಿಗನುಗುಣವಾಗಿ ವೈವಿಧ್ಯತೆ ಕಂಡು ಬಂದರೂ, ಒಂದು ಏಕವಾಕ್ಯತೆ ಅಗೋಚರವೇನಲ್ಲ.

> ಶ್ರೀರಾಮಕೃಷ್ಣರು ಭಾರತೀಯ ಸಂಸ್ಕೃತಿ, ಪರಂಪರೆಗಳೇ ಮೂರ್ತಿವೆತ್ತವರು. ಭಾರತೀಯ ಧರ್ಮಪ್ರಜ್ಞೆಯು ಶ್ರೀರಾಮಕೃಷ್ಣರಲ್ಲಿ ಪರಿಪುಷ್ಟಿಯನ್ನು ಪಡೆದ ಬಗೆಯನ್ನು ಪರಿಣಾಮಕಾರಿಯಾಗಿ ಈ ಲೇಖನ ಬಿಂಬಿಸುವುದು. ಪೂಜ್ಯ ಸ್ವಾಮೀಜಿಯವರು ತಮ್ಮ 'ಬದುಕಲು ಕಲಿಯಿರಿ' ಪುಸ್ತಕದ ಮೂಲಕ ಪ್ರಸಿದ್ಧರಾಗಿದ್ದಾರೆ. ಅವರು ಕೊಡಗಿನ ಪೊನ್ನಂಪೇಟೆಯಲ್ಲಿರುವ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರು.

ನಮ್ಮ ಕಾಲದಲ್ಲೇ ಇದ್ದ 'ಅವತಾರವರಿಷ್ಠ'ರಾದ ಶ್ರೀರಾಮಕೃಷ್ಣರು ಜಗತ್ತಿನ ಧಾರ್ಮಿಕ ಇತಿಹಾಸದಲ್ಲೇ ಅತಿ ಅಪೂರ್ವ ವ್ಯಕ್ತಿ. ಅವರ ಜೀವನೋಪದೇಶಗಳು ಸನಾತನ ಧರ್ಮವು ಸಾರುವ ತತ್ತ್ವಕ್ಕನುಗುಣವಾಗಿದ್ದುವಲ್ಲದೇ ಆಧುನಿಕ ಮನಸ್ಸಿಗೆ ಹಿಡಿಸುವ ಹೊಸತನದ ಆಕರ್ಷಣೆಯೊಂದಿಗೂ ಕೂಡಿವೆ.

**....ಶ್ರೀರಾಮಕೃಷ್ಣರು ಆವಿರ್ಭವಿಸಿ ನಿಜವಾದ ಆರ್ಯ ಧರ್ಮ ಯಾವುದು, ವಿವಿಧ ಮತಗಳ ಏಕತೆಯ ರಹಸ್ಯ ಎಲ್ಲಿದೆ ಎಂಬುದನ್ನು ತೋರಿಸಿಕೊಟ್ಟರು. ವಿವಿಧ ಮತಪಂಥಗಳಾಗಿ ಚೂರುಚೂರಾಗಿದ್ದ ಧರ್ಮವನ್ನು ಒಂದುಗೂಡಿಸಿದರು. ಲೋಕಾಚಾರ ಮತ್ತು ಕಂದಾಚಾರಗಳಿಗೆ ಬದ್ಧರಾಗಿದ್ದ ದೇಶೀಯರಿಗೆ ಭ್ರಾಂತಿಸ್ಥಾನವಾಗಿದ್ದ ಮತ್ತು ಮತೀಯ ಕಲಹದಿಂದಾಗಿ ವಿದೇಶೀಯರ ಜುಗುಪ್ಸೆಗೆ ಕಾರಣವಾಗಿದ್ದ ಹಿಂದೂಧರ್ಮದ ಕಳಂಕವನ್ನು ಹೋಗಲಾಡಿಸಿದರು. ತಮ್ಮ ಜೀವನದ ಮೂಲಕವೇ ಆ ಸನಾತನ ಧರ್ಮದ ಉದಾತ್ತ ಭಾವನೆಗಳನ್ನು ಪ್ರತಿಬಿಂಬಿಸುತ್ತ, ಅವರು ಈ ಕಾರ್ಯವನ್ನು ಸಾಧಿಸಿದರು. – ಸ್ವಾಮಿ ವಿವೇಕಾನಂದ**

ಭಾರತಕ್ಕೆ ಅವರಂಥ ಉದಾರಚರಿತರಾದ ವಿಭೂತಿಪುರುಷರ ಆಗಮನದ ಅವಶ್ಯಕತೆ ಇತ್ತು. ಋಷಿಗಳು ಕಂಡ ಆದರ್ಶಗಳು ಪುಸ್ತಕ ಪಾಂಡಿತ್ಯವಾಗಿ ಉಳಿಯಲಾಗದು, ಉಳಿಯಬಾರದು; ಅವನ್ನು ಅನುಷ್ಠಾನ ಮಾಡಿ ನಿಜವಾಗಿಯೂ ಜೀವನ ಸಾರ್ಥಕ ಮಾಡಿಕೊಳ್ಳಬಹುದೆಂಬುದನ್ನು ಸ್ಪಷ್ಟವಾಗಿ ತೋರಿಸುವವರು ಬೇಕಿತ್ತು. ಕಂಗೊಳಿಸುವ ವೈಜ್ಞಾನಿಕ ಪ್ರತಿಭೆಯ ಬೆಳಕಿನಲ್ಲಿ ಬೆಳೆದ, ಇಹಲೋಕವೇ ಸರ್ವಸ್ವವೆನ್ನುವ ಜಡವಾದದ ಬೆಂಕಿಯನ್ನು, ವೇದಾಂತದ ಅಮೃತಸಲಿಲದಿಂದ ಶಾಂತಗೊಳಿಸಬೇಕೆಂಬುದನ್ನು ಸಾರುವ ಒಬ್ಬ ಮಹಾ ಪ್ರವಾದಿಯು ಬೇಕಿತ್ತು. ಸತ್ಯದ ಬೆಳಕಿನಲ್ಲಿ ಬೇರೆ ಬೇರೆ ಧರ್ಮಗಳ ಅರ್ಥವೇನು ಎಂಬುದು ತಿಳಿಯಬೇಕಿತ್ತು. ಮಹಾತ್ಮ ಗಾಂಧೀಜೀಯವರ ಮಾತಿನಂತೆ **'ಜೀವಂತ ಧರ್ಮ'** ಏನೆಂಬುದನ್ನು ತೋರಿಸಿಕೊಡುವವರೊಬ್ಬರು ಬೇಕಾಗಿದ್ದರು.

"ಶ್ರೀರಾಮಕೃಷ್ಣರ ಜೀವನವನ್ನು ಓದದೆ ವೇದ, ವೇದಾಂತ ಮತ್ತು ಭಾಗವತ ಇತರ ಪುರಾಣಗಳನ್ನು ನಿಜವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಭಾರತದ ಧಾರ್ಮಿಕ ಸಾಹಿತ್ಯದ ಮೇಲೆ ಅವರ ಜೀವನವು ಅತ್ಯಂತ ಶಕ್ತಿಶಾಲಿಯಾದ ಬೆಳಕನ್ನು ಬೀರುವುದು. ಅವರ ಜೀವನ, ವೇದ ಮತ್ತು ಅವುಗಳ ಗುರಿಯನ್ನು ಕುರಿತ ಸಚೇತನ ಭಾಷ್ಯ. ಅವರು ತಮ್ಮ ಒಂದು ಜೀವನದಲ್ಲಿ ಸಮಗ್ರ ಯುಗದ ರಾಷ್ಟ್ರೀಯ ಧಾರ್ಮಿಕ ಜೀವನವನ್ನು ನಡೆಯಿಸಿದರು." – ಸ್ವಾಮಿ ವಿವೇಕಾನಂದರ ಈ ಮಾತುಗಳು ಅಕ್ಷರಶಃ ಸತ್ಯವೆಂಬುದು ಪರಮಹಂಸರ ಜೀವನವನ್ನು ಓದಿದಾಗ ಸ್ಪಷ್ಟವಾಗುವುದು.

### ತ್ಯಾಗಾದರ್ಶ ಪ್ರದರ್ಶಕ

ದೀರ್ಘಕಾಲದ ಅಧ್ಯಯನ, ಮನನ, ಧ್ಯಾನ, ಧಾರಣೆಗಳ ಮೂಲಕ ನಿರಂತರವೂ ಬದಲಾಗುತ್ತಿರುವ ಈ ಜಗತ್ತಿನ ಹಿನ್ನೆಲೆಯಲ್ಲಿ ಬದಲಾಗದ ಒಂದು ಅದ್ವಿತೀಯ ತತ್ತ್ವವಿದೆ ಎಂಬುದನ್ನು ಋಷಿಗಳು ಮನಗಂಡರು. ಸರ್ವವ್ಯಾಪಿಯಾದ ಆ ತತ್ತ್ವವು ನಮ್ಮ ಅಂತರತಮ ತತ್ತ್ವವಾದ ಆತ್ಮವೇ ಆಗಿದೆ ಎಂಬುದನ್ನೂ ತಿಳಿದುಕೊಂಡರು. ಮನುಷ್ಯನು ಕೇವಲ ಭೌತಿಕ ವಸ್ತುಗಳ ಸಂಘಾತ ಮಾತ್ರವಲ್ಲ; ಅವನು ತತ್ತ್ವತಃ ದೈವಿಕನು. ಅವನ ಆಂತರ್ಯದಲ್ಲಿರುವ ಆತ್ಮವೇ ಎಲ್ಲ ಆನಂದ, ಶಾಂತಿ, ಸಮಾಧಾನಗಳ ಮೂಲ ಮತ್ತು ಆಗರ. ಈ ಜಗತ್ತಿನಲ್ಲಿ ಮನುಷ್ಯನ ಜೀವನಕ್ಕೊಂದು ಅರ್ಥವಿದೆ. ತನ್ನ ನೈಜ ಸ್ವಭಾವವಾದ ದೈವಿಕತೆಯ ಸಾಕ್ಷಾತ್ಕಾರವೇ ಅದು. ಆಗಲೇ ಜೀವನದ ಸಾರ್ಥಕತೆ. ಆ ಅನುಭವವನ್ನು ಅವರು ಮೋಕ್ಷವೆಂದು ಹೆಸರಿಸಿದರು. ಇದು ಮನುಷ್ಯನು ಸಾಧಿಸಬಹುದಾದ ಅತ್ಯುನ್ನತ ಆದರ್ಶವಾದುದರಿಂದ ಪರಮ ಪುರುಷಾರ್ಥವೆಂದು ಕರೆದರು. ಸಾಮಾನ್ಯವಾಗಿ ಇಂದ್ರಿಯಗಳ ಮೂಲಕ ಪಡೆಯಬಹುದಾದ ಸುಖವನ್ನೇ ಮನುಷ್ಯನು ಧ್ಯೇಯವಾಗಿಟ್ಟುಕೊಂಡು ಜೀವನ ದುದ್ದಕ್ಕೂ ಹೋರಾಡುತ್ತಿರುತ್ತಾನೆ ಮತ್ತು ನಿಜವಾದ ಸುಖ ಶಾಂತಿಗಳಿಂದ ವಂಚಿತನಾಗಿ ತೊಳಲುತ್ತಾನೆ. ಅಂತರ್ಮುಖಿಯಾಗಿ ಅಮೃತತತ್ತ್ವವನ್ನು ಪಡೆಯದವರೆಗೆ ಅವನ ಹೋರಾಟ ಮತ್ತು ಕ್ಲೇಶಗಳಿಗೆ ಅಂತ್ಯವಿರುವುದಿಲ್ಲ.

ಉಪನಿಷತ್ತುಗಳಲ್ಲಿ ಮತ್ತೆ ಮತ್ತೆ ಮೇಲಿನ ಭಾವನೆ ಮರುಕಳಿಸುತ್ತದೆ. ಮರ್ತ್ಯನು ಅಮರ್ತ್ಯನಾಗುವುದೇ ಅದರ ಪಲ್ಲವಿ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಮೈತ್ರೇಯಿ ತನ್ನ ಪತಿಯಾದ ಮಹರ್ಷಿ ಯಾಜ್ಞವಲ್ಕ್ಯನನ್ನು ಪ್ರಶ್ನಿಸುತ್ತಾಳೆ: "ಈ ಭೂಮಂಡಲ ಮತ್ತು ಸಕಲ ಸಂಪತ್ತೂ ನನ್ನದಾದರೆ ಆಗ ನನಗೆ ಅಮರತ್ವ ಪ್ರಾಪ್ತಿಯಾಗುವುದೇ?" "ಇಲ್ಲ, ನಿನ್ನ ಜೀವನವು ದಾಸೀಜನ, ಸೇವಕರು, ಮಕ್ಕಳು, ನೆಂಟರಿಷ್ಟರು, ಧನ, ಧಾನ್ಯ, ವೈಭವಗಳಿಂದ ಕೂಡಿದ ಶ್ರೀಮಂತ ಜೀವನವಾಗುವುದು. ಆದರೆ ಆ ಸಂಪತ್ತಿನಿಂದ ಅಮರತ್ವ ಪ್ರಾಪ್ತಿಯಾಗದು" ಎಂದು ಪತಿಯಾದ ಯಾಜ್ಞವಲ್ಕ್ಯ ಉತ್ತರ ಕೊಡುತ್ತಾನೆ. ಅದೇ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯನು ಪ್ರಾಚೀನ ಭಾರತದ ಪ್ರತಿಭಾಶಾಲಿನಿ ವಿದುಷಿಯಾದ ಗಾರ್ಗಿಗೆ ಹೀಗೆ ಹೇಳುತ್ತಾನೆ: "ಗಾರ್ಗಿ, ಯಾರು ಅಕ್ಷರವಾದುದನ್ನು ತಿಳಿದುಕೊಳ್ಳದೇ ಯಜ್ಞಯಾಗಗಳನ್ನು ಮಾಡುತ್ತಾನೋ, ನೇಮನಿಷ್ಠೆಯಿಂದ ಕಾಯಕ್ಲೇಶಗಳನ್ನು ಅನುಭವಿಸುತ್ತಾನೋ (ಅವನು ಅದನ್ನು ಸಾವಿರಾರು ವರ್ಷಗಳವರೆಗೆ ಮಾಡುತ್ತಿದ್ದರೂ) ಅವುಗಳೆಲ್ಲವೂ ನಾಶವಾಗುತ್ತವೆ. ನಾಶರಹಿತವಾದುದನ್ನು ತಿಳಿದುಕೊಳ್ಳದೇ ಯಾರು ಈ ಜಗತ್ತಿನಿಂದ ಹೊರಟುಹೋಗುತ್ತಾನೋ ಅವನು ದುಃಖಿಯಾಗುತ್ತಾನೆ." ಸಹಸ್ರಾರು ಮಾತಾಪಿತೃಗಳಿಗಿಂತಲೂ ಹೆಚ್ಚಿನ ಅನುಕಂಪದಿಂದ ಋಷಿಗಳು ಹೀಗೆ ಕೂಗಿ ಕರೆಯುತ್ತಿದ್ದಾರೆ: 'ಆತ್ಮನನ್ನು ತಿಳಿ', 'ಇತರ ವ್ಯರ್ಥ ಮಾತುಗಳನ್ನು ಬಿಟ್ಟುಬಿಡಿ', 'ಅಜ್ಞಾನ ನಿದ್ರೆಯಿಂದ ಎಚ್ಚರಗೊಳ್ಳಿ', 'ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೆ ಅಪ್ರಮತ್ತರಾಗಿ ಹೋರಾಡಿ.'

ಸನಾತನ ಧರ್ಮದ ಆದರ್ಶಗಳ ಮೂರ್ತಸ್ವರೂಪವೇ

ಶ್ರೀರಾಮಕೃಷ್ಣರು. ಬಾಲ್ಯದಿಂದಲೇ ಜೀವನದ ಪರಮ ಪುರುಷಾರ್ಥವನ್ನು ಸಾಕ್ಷಾತ್ಕರಿಸಿಕೊಳ್ಳುವ ಹಂಬಲ ಅವರಲ್ಲಿ ತೀವ್ರವಾಗಿತ್ತು. ಯೌವನದಲ್ಲಿ ಕಾಲಿರಿಸುತ್ತ ಭಗವತ್ಸಾಕ್ಷಾತ್ಕಾರವಿಲ್ಲದ ಬದುಕು ವ್ಯರ್ಥವೆಂದು ಅವರು ಮನಗಂಡರು. ಪ್ರಪಂಚದ ವೈಭವಗಳಾವುವೂ ಅವರಿಗೆ ಬೇಕಾಗಿರಲಿಲ್ಲ. "ಇಲ್ಲಿ, ಈ ಜಗತ್ತಿನಲ್ಲಿ ಬದುಕಿರುವಾಗಲೇ ಆತ್ಮಸಾಕ್ಷಾತ್ಕಾರ ಮಾಡಿಕೊಂಡರೆ ಜೀವನ ಸಾರ್ಥಕ. ಹಾಗೆ ಮಾಡದಿದ್ದರೆ ಅದು ವಿನಾಶದ ಹಾದಿ" ಎಂದು ಉಪನಿಷತ್ತು ಸಾರುತ್ತದೆ. ಶ್ರೀರಾಮಕೃಷ್ಣರು ಸಾಕ್ಷಾತ್ಕಾರಕ್ಕಾಗಿ ತಮ್ಮ ಹೃದಯದಲ್ಲಿ ಉಂಟಾದ ತೀವ್ರ ವ್ಯಾಕುಲತೆಯನ್ನು ತಮ್ಮ ಪ್ರೀತಿಯ ಶಿಷ್ಯರಲ್ಲಿ ಒಮ್ಮೆ ಹೀಗೆ ಪ್ರಸ್ತಾಪಿಸಿದ್ದರು:

"ಭಗವತಿಯ ದರ್ಶನವಾಗಿಲ್ಲವೆಂದು ನನ್ನ ಹೃದಯದಲ್ಲಿ ಸಹಿಸಲು ಅಸಾಧ್ಯವಾದ ವ್ಯಥೆ ತುಂಬಿತ್ತು. ಒದ್ದೆ ಬಟ್ಟೆಯನ್ನು ಹಿಂಡಿದಂತೆ ನನ್ನ ಹೃದಯ ಮನಸ್ಸುಗಳನ್ನು ಯಾರೋ ಹಿಂಡಿದಂತಾಗುತ್ತಿತ್ತು, ಸಂಜೆಯಾಯಿತು; ಕಾಳೀ ಮಂದಿರದ ಘಂಟೆ ಧ್ವನಿ ಕೇಳಿಸಿತು. ಆಗಲೇ ತಾಯಿಯ ಹತ್ತಿರ ಮೊರೆಯಿಡುತ್ತಿದ್ದೆ: 'ಅಮ್ಮಾ ಇನ್ನೊಂದು ದಿನ ಕಳೆಯಿತು; ಎಲ್ಲಿದ್ದೀಯಾ?' ತಾಯಿಯ ದರ್ಶನವಾಗಲಾರದೇನೋ ಎನ್ನುವ ಭೀಕರ ಚಿಂತೆ ನನ್ನನ್ನಾವರಿಸಿತ್ತು. ಭಗವದ್ದರ್ಶನವಿಲ್ಲದ ಜೀವನ ವ್ಯರ್ಥವೆಂದೇ ತೋರಿತು."

ಮುಂದೆ ತಮ್ಮ ನೆಚ್ಚಿನ ಭಕ್ತರಿಗೆ ಸಾಧನೆಯ ರಹಸ್ಯವನ್ನು ಹೇಳುತ್ತ ಶ್ರೀರಾಮಕೃಷ್ಣರು, "ತೀವ್ರ ವ್ಯಾಕುಲತೆ ಇತ್ತು ಎಂದರೆ ಸಾಕ್ಷಾತ್ಕಾರ ದೂರವಿಲ್ಲ" ಎನ್ನುತ್ತಿದ್ದರು. "ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೆ. ಸೂರ್ಯೋದಯಕ್ಕೆ ಇನ್ನು ತಡವಿಲ್ಲ. ವ್ಯಾಕುಲತೆ ಇದ್ದರೆ ಇಲ್ಲೇ ಕಾಶಿ... ವ್ಯಾಕುಲನಾಗಿ ಭಗವಂತನನ್ನು ಕರೆ–ಅವನು ಕಾಣಿಸಿಕೊಳ್ಳುತ್ತಾನೆ... ವ್ಯಾಕುಲತೆ ಭೋಗಾಂತವಾಗದೇ ಬರಲಾರದು." ಶಾಸ್ತ್ರಗಳು ಹೇಳುವ ಸಾಕ್ಷಾತ್ಕಾರದ ತೀವ್ರ ಹಂಬಲ ಪರಮಹಂಸರಲ್ಲಿ ಪೂರ್ಣ ರೂಪದಲ್ಲಿ ಪ್ರಕಟವಾದುದನ್ನು ನಾವು ಕಾಣುತ್ತೇವೆ.

ಯಾಜ್ಞವಲ್ಕ್ಯರು ಸಂಪತ್ತಿನಿಂದ ಅಮೃತತ್ತ್ವವನ್ನು ಪಡೆಯಲು ಅಸಾಧ್ಯ ಎಂದಾಗ ತ್ಯಾಗವೇ ಅದನ್ನು ಹೊಂದುವ ಮಾರ್ಗ ಎಂಬುದನ್ನು ಹೇಳಿದಂತಾಯಿತು. ನಿಜವಾಗಿಯೂ ಭಾರತೀಯ ಧರ್ಮದ ಸೌಧ ನಿಂತಿರುವುದೇ ತ್ಯಾಗದ ತಳಹದಿಯ ಮೇಲೆ. ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ತ್ಯಾಗ ಮತ್ತು ಸೇವೆಗಳೇ ಭರತಖಂಡದ ರಾಷ್ಟ್ರೀಯ ಆದರ್ಶಗಳು. "ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ಧನದಿಂದಲ್ಲ, ತ್ಯಾಗದಿಂದಲೇ ಕೆಲವರು ಅಮೃತತ್ತ್ವವನ್ನು ಪಡೆದರು" ಎಂಬುದು ವೈದಿಕ ಋಷಿವಾಣಿ. ಈ ತ್ಯಾಗದ ಪರಾಕಾಷ್ಠೆಯನ್ನು ತಲುಪಲು ಸೋಪಾನಕ್ರಮದ ವ್ಯವಸ್ಥೆಯೇ ಆಶ್ರಮ ಧರ್ಮ. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಆಶ್ರಮಗಳಲ್ಲಿ ತ್ಯಾಗದ ಅಭಿವ್ಯಕ್ತಿಯು ಹೆಚ್ಚುತ್ತ ಸಂನ್ಯಾಸದಲ್ಲಿ ಪೂರ್ಣತೆಯನ್ನು ಮುಟ್ಟುವುದು. ತತ್ಪರಿಣಾಮವಾಗಿ ಇಹಲೋಕ ಯಾತ್ರೆಯನ್ನು ಸಮಾಪ್ತಿಗೊಳಿಸುವ ಮೊದಲೇ ಜೀವನದ ಪರಮ ಗುರಿಯನ್ನು ಹೊಂದಿ ಮನುಷ್ಯನು ಕೃತಾರ್ಥನಾಗುವನು.

ಶ್ರೀರಾಮಕೃಷ್ಣರಲ್ಲಿ ತ್ಯಾಗವು ಅಭೂತಪೂರ್ವ ರೀತಿಯಲ್ಲಿ ವ್ಯಕ್ತವಾಯಿತು. ಅವರ ಸತ್ಯಾನುರಾಗ, ಸತ್ಯಾನ್ವೇಷಣೆಯ ತೀವ್ರತೆಗಳು ಪ್ರಾಪಂಚಿಕ ಸೆಳೆತಗಳೆಲ್ಲವನ್ನೂ ಸುಟ್ಟುಹಾಕಿ ಅವರನ್ನು ಅಧ್ಯಾತ್ಮ ಸಾಮ್ರಾಜ್ಯದ ಸಾರ್ವಭೌಮರನ್ನಾಗಿ ಮಾಡಿದವು. ಸಂನ್ಯಾಸದ ಸರ್ವೋಚ್ಚ ಆದರ್ಶಗಳ ಜ್ವಲಂತ ಉದಾಹರಣೆಯಾಗಿ ತ್ಯಾಗದ ಎಲ್ಲ ಕಠಿಣತಮ ಪರೀಕ್ಷೆಗಳಲ್ಲೂ ಅವರು ಉತ್ತೀರ್ಣರಾಗಿ ಆದರ್ಶಪಥ ಪ್ರದರ್ಶಕರಾದರು.

**ನವಯುಗ ಧರ್ಮಪ್ರವರ್ತಕ**

ಮನುಷ್ಯನ ಸ್ವಭಾವ ಮತ್ತು ಯೋಗ್ಯತೆಗಳನ್ನು ಗುರುತಿಸಿ ಅವನು ನಿಂತ ಸ್ಥಾನದಿಂದ, ಗೊಂದಲಪಡಿಸದೆ ಮೆಲ್ಲನೆ ಆಂತರ್ಯದೆಡೆಗೆ ಮೇಲಕ್ಕೇರುವಂತೆ ಮಾಡುವ ವ್ಯವಸ್ಥೆ ಸನಾತನ ಧರ್ಮದ ಒಂದು ವೈಶಿಷ್ಟ್ಯ. ಎಷ್ಟೋ ಧರ್ಮಗಳು ಜನರನ್ನು ಅತ್ಯುನ್ನತ ಆದರ್ಶದೆಡೆಗೆ ಒಂದೇ ಬಾರಿಗೆ ಏರಿಸುವ ಅತಿರೇಕ ಉತ್ಸಾಹದಿಂದ ಅಸಫಲತೆಯನ್ನು ಹೊಂದಿವೆ. ಸನಾತನ ಧರ್ಮ ಈ ಗಂಡಾಂತರದಿಂದ ಪಾರಾಗಲು ಕಾರಣವೇನೆಂದರೆ, ಅದು ಮನುಷ್ಯನ ಸ್ವಭಾವ, ಸಂಸ್ಕಾರ, ಸಾಮರ್ಥ್ಯಗಳ ವೈವಿಧ್ಯತೆಯನ್ನು ಗುರುತಿಸಿ, ಸಾವಧಾನವಾಗಿ ಗುರಿಯೆಡೆಗೆ ಪಯಣಗೈಯುವಂತೆ ಮಾಡುವುದೇ ಆಗಿದೆ. ಕರ್ಮಗಳನ್ನು ಹೇಳುವ ಪ್ರವೃತ್ತಿಮಾರ್ಗ, ತ್ಯಾಗವನ್ನು ಹೇಳುವ ನಿವೃತ್ತಿಮಾರ್ಗ – ಇವೆರಡೂ ವೇದಪ್ರಣೀತವೇ. ಆಚಾರ್ಯ ಶಂಕರರು ತಮ್ಮ ಭಗವದ್ಗೀತಾ ಭಾಷ್ಯಭೂಮಿಕೆಯಲ್ಲಿ ಈ ಎರಡು ಪದಗಳನ್ನು ಕುರಿತು ಹೀಗೆ ಹೇಳಿದ್ದಾರೆ: "ಭಗವಂತನು ಜಗತ್ತನ್ನು ಸೃಷ್ಟಿಸಿ ಇದರ ವ್ಯವಸ್ಥೆಗಾಗಿ ಮರೀಚಿಯೇ ಮೊದಲಾದ ಪ್ರಜಾಪತಿಗಳನ್ನು ಮೊದಲು ಸೃಷ್ಟಿಸಿ, ವೇದದಲ್ಲಿ ಹೇಳಿರುವ ಪ್ರವೃತ್ತಿಲಕ್ಷಣವಾದ ಧರ್ಮವನ್ನು ತಿಳಿಸಿಕೊಟ್ಟನು. ಆಮೇಲೆ ಸನಕ ಸನಂದನ ಮೊದಲಾದವರನ್ನುಂಟುಮಾಡಿ ಜ್ಞಾನವೈರಾಗ್ಯ ರೂಪವಾದ ನಿವೃತ್ತಿಲಕ್ಷಣವಾದ ಧರ್ಮವನ್ನು ಬೋಧಿಸಿದನು. ವೇದದಲ್ಲಿ ಹೇಳಿರುವ ಪ್ರವೃತ್ತಿಲಕ್ಷಣ, ನಿವೃತ್ತಿಲಕ್ಷಣ ಎಂಬ ಎರಡು ಬಗೆಯ ಧರ್ಮವೇ ಜಗತ್ತಿನ ಸ್ಥಿತಿಗೆ ಕಾರಣ. ಪ್ರಾಣಿಗಳ ಅಭ್ಯುದಯಕ್ಕೂ, ನಿಃಶ್ರೇಯಸ್ಸಿಗೂ ಕಾರಣವಾದ ಈ ಧರ್ಮವನ್ನು ಬಹಳ ಹಿಂದಿನಿಂದಲೂ ಎಲ್ಲ ವರ್ಣದವರೂ ಅನುಸರಿಸುತ್ತ ಬಂದರು."

ಪ್ರತಿಯೊಂದು ಸಮಾಜದಲ್ಲೂ ಪ್ರಾಪಂಚಿಕ ಜೀವನ ರುಚಿಸದ ವ್ಯಕ್ತಿಗಳಿದ್ದಾರೆ. ಆಧ್ಯಾತ್ಮಿಕ ಆದರ್ಶ ಅವರ ಮನಸ್ಸನ್ನು ಸಂಪೂರ್ಣ ಆಕರ್ಷಿಸುತ್ತದೆ. ಇಂದ್ರಿಯಗಳ ಮೂಲಕ ಬರುವ ಜ್ಞಾನ ಮತ್ತು ಸುಖದ ಪರಿಮಿತಿ ಅವರಿಗೆ ಸ್ಪಷ್ಟವಾಗಿ

ಗೋಚರಿಸಿ ಅದು ವ್ಯರ್ಥವೆಂದೇ ತೋರುವುದು. ಇಂದ್ರಿಯ ಸಂಯಮದ ಮೂಲಕ ಬಹಿರ್ಮುಖವಾಗಿ ಹರಿಯುವ ಮನಸ್ಸನ್ನು ಹಿಂತಿರುಗಿಸಿ ಅವರು ಆತ್ಮನಲ್ಲಿ ನೆಲೆಗೊಳಿಸುತ್ತಾರೆ, ಇಂದ್ರಿಯಾತೀತರಾಗುತ್ತಾರೆ. ಇಂಥ ಧೀರರಿಗೆ ಸನಾತನ ಧರ್ಮ ಅತ್ಯಂತ ಶ್ರೇಷ್ಠ ಸ್ಥಾನವನ್ನಿತ್ತಿದೆ. ಆ ಗೌರವ ಅವರಿಗೆ ಸಲ್ಲಬೇಕಾದುದು ಸಹಜವೇ. ಕಾರಣ, ಕತ್ತಿಯ ಅಲಗಿಗೆ ಹೋಲಿಸಿದ ತ್ಯಾಗದ ಈ ದಾರಿಯಲ್ಲಿ ನಡೆಯುವುದು ಅತ್ಯಂತ ಕಠಿಣ. ಭಗವಂತನಿಗಾಗಿ ಎಲ್ಲವನ್ನೂ ತ್ಯಾಗ ಮಾಡಿದವನು ಆಗಲೇ ಭಗವಂತನ ದಾರಿಯಲ್ಲಿ ಮುಕ್ಕಾಲು ಭಾಗವನ್ನು ದಾಟಿದಂತೆ ಎಂದು ಶ್ರೀರಾಮಕೃಷ್ಣರೇ ಹೇಳಿದ್ದಾರೆ.

ಶ್ರೀರಾಮಕೃಷ್ಣರು ತ್ಯಾಗೀಶ್ವರರಾದರೂ ಎಲ್ಲ ತೆರನ ಸಾಧಕರನ್ನು ಅನುಕಂಪೆಯಿಂದ ಕಂಡರು. ಶ್ರದ್ಧೆ, ಭಕ್ತಿ, ವಿವೇಕವೇ ಮೊದಲಾದ ಸದ್ಗುಣಗಳಿಂದ ಕೂಡಿದ ಕರ್ಮಮಾರ್ಗವೂ ಭಗವಂತನೆಡೆಗೆ ಹೋಗುವ ಒಂದು ಶ್ರೇಷ್ಠ ಮಾರ್ಗವೆಂದು ಅವರು ಹೇಳಿದರು. "ಯಾರಿಗೆ ಈ ಪ್ರಪಂಚದ ಅನುಭವಗಳನ್ನು ಪಡೆಯಬೇಕಾಗಿದೆಯೋ ಅವರು ಗೃಹಸ್ಥರಾಗಿದ್ದುಕೊಂಡು ಭಗವಂತನನ್ನು ಪ್ರಾರ್ಥಿಸಬೇಕು." "ಗೃಹಸ್ಥರಿಗೆ ದೈವಸಾಕ್ಷಾತ್ಕಾರ ಸಾಧ್ಯವೇ?" ಎಂದು ಒಮ್ಮೆ ಒಬ್ಬಾತ ಅವರನ್ನು ಕೇಳಿದ. ಉತ್ತರವಾಗಿ ಅವರು ಹೇಳಿದ ಮಾತು ಇದು: "ನಾನು ಹುಟ್ಟಿದ ಹಳ್ಳಿಯ ಹತ್ತಿರ ಹೆಂಗಸರು ಅವಲಕ್ಕಿ ಕುಟ್ಟುತ್ತಿರುವುದನ್ನು ನೋಡಿದ್ದೇನೆ. ಒಂದು ಕೈಯಿಂದ ಒರಳಿನಲ್ಲಿರುವ ಅವಲಕ್ಕಿಯನ್ನು ಆಡಿಸುವಳು. ಮತ್ತೊಂದು ಕೈಯಿಂದ ಮಗುವನ್ನು ಹಿಡಿದುಕೊಂಡು ಅದಕ್ಕೆ ಎದೆಹಾಲನ್ನು ಕುಡಿಸುವಳು. ಅದೇ ಕಾಲದಲ್ಲಿ ಬಂದವರ ಹತ್ತಿರ ನಿನ್ನ ಹಿಂದಿನ ಬಾಕಿ ಇಷ್ಟು, ಇವತ್ತಿನ ಬಾಕಿ ಇಷ್ಟು ಎಂದು ವ್ಯಾಪಾರ ಮಾಡುವಳು. ಮಾಡುವ ಕೆಲಸ ಅಷ್ಟೊಂದು ಇದ್ದರೂ ಕುಟ್ಟುವ ಯಂತ್ರ ಕೈಮೇಲೆ ಬಿದ್ದು ಗಾಯಮಾಡದೇ ಇರಲಿ ಎಂದು ಯಾವಾಗಲೂ ತನ್ನ ಮನಸ್ಸನ್ನು ಅದರ ಮೇಲೆ ಇಟ್ಟಿರುವಳು. 'ಪ್ರಪಂಚದಲ್ಲಿರಿ, ಆದರೆ ಯಾವಾಗಲೂ ಅವನನ್ನು ನೆನೆಯಿರಿ.' ನಿಜವಾದ ಧಾರ್ಮಿಕನಾಗುವುದು ಬಾಹ್ಯ ಪರಿಕರಗಳಿಂದಲ್ಲ, ತೋರಿಕೆಯಿಂದಲ್ಲ. ಯಾರು ಮಾಂಸವನ್ನು ತಿಂದರೂ ಭಗವಂತನಿಗಾಗಿ ವ್ಯಾಕುಲರಾಗಿದ್ದಾರೋ, ಅವರು ಧನ್ಯರು; ಯಾರು ಹವಿಷ್ಯಾನ್ನ ತಿಂದು ಕಾಮ ಕಾಂಚನದಲ್ಲಿ ಆಸಕ್ತರಾಗಿರುವರೊ ಅವರು ಜಘನ್ಯರು."

ಆಧ್ಯಾತ್ಮಿಕ ಹಿನ್ನೆಲೆ ಇಲ್ಲದ ಕರ್ಮೋತ್ಸಾಹ ಪ್ರಾಪಂಚಿಕ ಶೋಕ ತಾಪಗಳನ್ನು ಸರಿಯಾಗಿ ಎದುರಿಸುವ ಶಕ್ತಿಯನ್ನೀಯದು. ಅಂತಹ ಕರ್ಮಗಳಿಂದ ರಾಗ, ದ್ವೇಷ, ಅಹಂಕಾರ, ಮಮಕಾರಗಳು ಹೆಚ್ಚಿ ಬಂಧನಗಳು ಮತ್ತಷ್ಟು ಗಾಢವಾಗುವ ಭಯವಿದೆ. "ಭಗವದ್ಭಕ್ತಿಯನ್ನು ಬೆಳೆಸಿಕೊಳ್ಳದೇ ಪ್ರಪಂಚವನ್ನು ಪ್ರವೇಶಿಸಿದರೆ ಹೆಚ್ಚು ಹೆಚ್ಚು ಅದರ ಪ್ರಭಾವದಲ್ಲಿ ಸಿಲುಕಿಕೊಳ್ಳುವೆ. ಮೊದಲು ಕೈಗೆ ಎಣ್ಣೆ ಹಚ್ಚಿಕೊಂಡು ಆಮೇಲೆ ಹಲಸಿನಹಣ್ಣನ್ನು ಬಿಡಿಸಲು ಹೋಗು" ಎಂದು ಪರಮಹಂಸರು ಹೇಳುತ್ತಿದ್ದರು.

ಶ್ರೀರಾಮಕೃಷ್ಣರು ಗೃಹಸ್ಥ, ಸಂನ್ಯಾಸ – ಈ ಎರಡು ಮಾರ್ಗಗಳಿಂದಲೂ ಭಗವಂತನನ್ನು ಪಡೆಯಬಹುದೆಂಬುದನ್ನು ತೋರುವುದಕ್ಕಾಗಿಯೋ ಎಂಬಂತೆ ತಮ್ಮ ಗರಡಿಯಲ್ಲಿ ಗೃಹೀ ಮತ್ತು ತ್ಯಾಗೀ ಭಕ್ತರನ್ನು ಅದ್ಭುತ ಆಧ್ಯಾತ್ಮಿಕ ಚಾರಿತ್ರ್ಯ ಸಂಪನ್ನರನ್ನಾಗಿ ತರಬೇತುಗೊಳಿಸಿದರು.

**ಧರ್ಮಸಮನ್ವಯಕಾರ**

ನಮ್ಮ ಶಾಸ್ತ್ರಗಳಲ್ಲಿ ದೇವರನ್ನು ಕುರಿತ ಎರಡು ಪ್ರಮುಖ ಭಾವನೆಗಳಿವೆ. ಒಂದು ಸಾಕಾರ ದೇವರು, ಇನ್ನೊಂದು ನಿರಾಕಾರ. "ಸರ್ವವ್ಯಾಪಿ, ಸರ್ವಶಕ್ತ, ಸರ್ವಜ್ಞ, ಸೃಷ್ಟಿ ಸ್ಥಿತಿ ಲಯಕರ್ತ, ವಿಶ್ವನಿಯಾಮಕ, ಎಲ್ಲ ಜೀವಾತ್ಮರುಗಳಿಂದ ಹಾಗೂ ಪ್ರಕೃತಿಯಿಂದ ಸರ್ವದಾ ಭಿನ್ನ" – ಇದು ಸಾಕಾರ ದೇವರನ್ನು ಕುರಿತ ಭಾವನೆ. ಇನ್ನೊಂದು ಭಾವನೆ ನಿರಾಕಾರ ದೇವರನ್ನು ಕುರಿತದ್ದು. ಅಲ್ಲಿ ದೇವರನ್ನು ಕುರಿತ ಯಾವ ವಿಶೇಷಣಗಳೂ ಇಲ್ಲ. ಅಲ್ಲಿ ಭಗವಂತ ಸಚ್ಚಿದಾನಂದ ಸ್ವರೂಪ ಮಾತ್ರ. ಈ ಇಬ್ಬಗೆಯ ಭಾವನೆಗಳು ವಿಚಾರಾತ್ಮಕ ಮತ್ತು ಭಾವನಾತ್ಮಕ ವ್ಯಕ್ತಿಗಳಿಬ್ಬರ ಆಧ್ಯಾತ್ಮಿಕ ಆವಶ್ಯಕತೆಗಳನ್ನು ಪೂರೈಸುತ್ತವೆ. ನಿರಾಕಾರ ಭಾವನೆಯು ಶಾಸ್ತ್ರಗಳಲ್ಲಿ ಪ್ರಬಲವಾಗಿದ್ದರೂ ಸಗುಣ ಸಾಕಾರ ಭಾವನೆ ಸುಲಭಗ್ರಾಹ್ಯವಾಗಿ ಜನರ ಕಲ್ಪನೆ ಮತ್ತು ಅಭಿರುಚಿಯನ್ನು ಕೆರಳಿಸುವಂತೆ ಇದ್ದುದರಿಂದ ಜನಾದರಣೀಯವಾಯಿತು. ಶ್ರೀರಾಮಕೃಷ್ಣರಿಗಿಂತ ಮೊದಲು ಬಂದ ಸನಾತನ ಧರ್ಮದ ಮುಖಂಡರು ಈ ಎರಡು ಭಾವನೆಗಳಲ್ಲಿ ಯಾವುದಾದರೊಂದರ ವಕ್ತಾರರಾಗಿದ್ದರು. ಶ್ರೀರಾಮಕೃಷ್ಣರು ತಮ್ಮ ಅಪೂರ್ವ ಸಾಧನೆ ಮತ್ತು ಸಿದ್ಧಿಗಳಿಂದ ಈ ಎರಡು ಭಾವನೆಗಳೂ ನಿಜವೆಂದೂ, ಅವು ಒಂದೇ ಸತ್ಯದ ಎರಡು ಮುಖಗಳೆಂದೂ ಹೇಳಿದರು. ನಿಜ ಹೇಳಬೇಕೆಂದರೆ ಯಾರು ನಿರಾಕಾರನೋ ಅವನು ಸಾಕಾರನೂ ಅಹುದು. ತನ್ನ ಭಕ್ತರಿಗೆ ಅವನು ಸಾಕಾರನಾಗಿ ಕಾಣಿಸಿಕೊಳ್ಳುವನು. ನಿರಾಕಾರನಾಗಿದ್ದವನು ಭಕ್ತನ ಪ್ರೀತಿಯ ಸ್ಪರ್ಶದಿಂದ ಆಕಾರ ತಳೆಯುತ್ತಾನೆ. ಅವನು ಹೀಗೆಯೇ ಇದ್ದಾನೆ, ನನ್ನ ಪುಸ್ತಕದಲ್ಲಿ ಅವನನ್ನು ಕುರಿತು ಹೀಗೆ ಹೇಳಿದ್ದಾರೆ, ನಿನ್ನ ಪುಸ್ತಕದಲ್ಲಿ ಹೇಳಿದ್ದು ತಪ್ಪು ಎನ್ನುವ ಆಗ್ರಹ, ಕಲಹವೇಕೆ? "ಅವನು ಸಾಕಾರನೂ ಅಹುದು, ನಿರಾಕಾರನೂ ಅಹುದು; ಅವನು ಇನ್ನೇನೋ ಆಗಿದ್ದಾನೆ" ಎಂದು ಪರಮಹಂಸರು ಮಾರ್ಮಿಕವಾಗಿ ಹೇಳಿ ಅನುಭವೈಕಗಮ್ಯವಾದ ಪರತತ್ತ್ವದ ವಿಚಾರವಾಗಿ ವ್ಯರ್ಥ ಚರ್ಚೆ, ಜಗಳ ಸಲ್ಲದೆಂಬುದನ್ನು ತೋರಿಸಿದರು.

"ಸತ್ಯ ಸಾಕ್ಷಾತ್ಕಾರಕ್ಕೆ ಒಂದೇ ದಾರಿ – ಒಬ್ಬ ಪ್ರವಾದಿಯ ಮೂಲಕವೇ – ಅದನ್ನೊಪ್ಪದವರಿಗೆ ನರಕವೇ ಗತಿ" ಎನ್ನುವ ಆಗ್ರಹ ಸನಾತನ ಧರ್ಮದ ರೀತಿಯಲ್ಲ. "ಯಾವುದರೊಂದಿಗೆ ಹೋಲಿಸಿದರೆ ಇಂದಿನ ವಿಜ್ಞಾನಶಾಸ್ತ್ರದ ನವನವಾನ್ವೇಷಣೆಗಳು ಕೇವಲ ಪ್ರತಿಧ್ವನಿಯಂತೆ ತೋರುವುವೋ ಅಂತಹ ವೇದಾಂತ

ತತ್ತ್ವದ ಅತ್ಯುನ್ನತ ಆದರ್ಶದಿಂದ ಪ್ರಾರಂಭಿಸಿ ವಿಗ್ರಹಾರಾಧನೆಯ ಅಪೂರ್ಣ ಭಾವನೆಗಳು, ಜೊತೆಗೆ ಲೆಕ್ಕವಿಲ್ಲದಷ್ಟು ಪುರಾಣಗಳ ರಾಶಿ, ಬೌದ್ಧರ ಅಜ್ಞೇಯವಾದ, ಜೈನರ ನಾಸ್ತಿಕತೆ ಮುಂತಾದವುಗಳಿಗೆಲ್ಲ ಹಿಂದೂಧರ್ಮದಲ್ಲಿ ಒಂದು ಸ್ಥಾನವಿದೆ" ಎಂದು ಸ್ವಾಮಿ ವಿವೇಕಾನಂದರು ಸನಾತನ ಧರ್ಮದ ಉದಾರತೆ, ವೈವಿಧ್ಯಗಳನ್ನು ವರ್ಣಿಸಿದ್ದಾರೆ.

ಸನಾತನ ಧರ್ಮ ಸಾರುವ ಸಾಧನೆಗಳನ್ನು ಸಾಮಾನ್ಯವಾಗಿ ಎರಡು ವಿಭಾಗಗಳನ್ನಾಗಿ ಮಾಡಬಹುದು. ಒಂದನೆಯದು ದೇವರ ನಿರಾಕಾರ ಭಾವನೆಯನ್ನವಲಂಬಿಸಿದುದು; ಇನ್ನೊಂದು ಸಾಕಾರವನ್ನು. ಮೊದಲನೆಯದೇ ಜ್ಞಾನಮಾರ್ಗ. ಎರಡನೆಯದು ಭಕ್ತಿಮಾರ್ಗ. ಇವುಗಳಲ್ಲಿ ಒಂದಕ್ಕಿಂತ ಇನ್ನೊಂದು ಹೆಚ್ಚು ಶ್ರೇಷ್ಠ ಎನ್ನುವ ಮಾತು ಪೂರ್ಣದೃಷ್ಟಿಯ ಮಾತಲ್ಲ. ಕಾಲ ಕಳೆದಂತೆ ಈ ಎರಡೂ ಪಥಗಳನ್ನು ಸಾಧಕನ ಹಿತಕ್ಕನುಗುಣವಾಗಿ ಹೆಚ್ಚು ಕ್ರಮಬದ್ಧ ಹಾಗೂ ನಿರ್ದಿಷ್ಟಗೊಳಿಸುವ ಪ್ರಯತ್ನ ನಡೆಯಿತು. ಇವುಗಳನ್ನು ಜ್ಞಾನಯೋಗ, ರಾಜಯೋಗ, ಕರ್ಮಯೋಗ, ಭಕ್ತಿಯೋಗಗಳೆಂದು ಹೆಸರಿಸಲಾಯಿತು. ಸ್ವಾಮಿ ವಿವೇಕಾನಂದರು ಎಚ್ಚರಿಸಿದಂತೆ ಈ ವಿಭಾಗಗಳು ವಸ್ತುವನ್ನು ವಿಭಜಿಸಿ ಬೇರ್ಪಡಿಸಿದಂತೆ ಪರಸ್ಪರ ಭಿನ್ನವಾದವುಗಳಲ್ಲ. ಪ್ರತಿಯೊಬ್ಬನಲ್ಲಿಯೂ ಜ್ಞಾನ, ಇಚ್ಛೆ, ಕ್ರಿಯೆ ಮತ್ತು ಭಾವನಾಶಕ್ತಿಗಳಿದ್ದರೂ ಅವುಗಳ ತೀವ್ರತೆ ಮತ್ತು ಅಭಿವ್ಯಕ್ತಿಗಳಲ್ಲಿ ಅವನವನ ಸಂಸ್ಕಾರಕ್ಕನುಗುಣವಾದ ವೈವಿಧ್ಯವಿದೆ. ಇದನ್ನಾಧರಿಸಿದ ನಾಲ್ಕು ಮಾರ್ಗಗಳೂ ಪರಸ್ಪರ ಪೂರಕಗಳೇ ಹೊರತು ವಿರೋಧಿಗಳಲ್ಲ.

### ಸತ್ಯಸಾಕ್ಷಾತ್ಕಾರದ ಸಾಹಸ

ಶ್ರೀರಾಮಕೃಷ್ಣರ ಸತ್ಯಸಾಕ್ಷಾತ್ಕಾರದ ಸಾಹಸವನ್ನು 'ಅನುಪಮ', 'ಅದ್ವಿತೀಯ' ಎಂಬ ಶಬ್ದಗಳಿಂದಲೇ ವರ್ಣಿಸಬೇಕಾಗುತ್ತದೆ. ಸನಾತನ ಧರ್ಮದಲ್ಲಿ ಹೇಳಿದ ವಿವಿಧ ಮಾರ್ಗಗಳನ್ನು ಅತ್ಯಂತ ಶ್ರದ್ಧೆಯಿಂದ ಅನುಸರಿಸಿ ಅವುಗಳ ಮೂಲಕ ಪರಮ ಗುರಿಯನ್ನು ಹೊಂದಬಹುದೆಂಬುದನ್ನು ಸ್ವಂತ ಅನುಭವದಿಂದ ಪ್ರತ್ಯಕ್ಷೀಕರಿಸಿದ ಅವರು ಪುಸ್ತಕಪಾಂಡಿತ್ಯದ ಶುಷ್ಕ ಸಮನ್ವಯಾಚಾರ್ಯರಾಗಿರಲಿಲ್ಲ. ಸತ್ಯವಿದ್ದರೆ ನಾವದನ್ನು ತಿಳಿಯಬೇಕು, ಆತ್ಮನಿದ್ದರೆ ಸಾಕ್ಷಾತ್ಕರಿಸಿಕೊಳ್ಳಬೇಕು, ಬರಿಯ ಮಾತಿನಿಂದೇನು? ಎನ್ನುವ ಛಲ ಅವರದು. ಜಗನ್ಮಾತೆಯ ದರ್ಶನಕ್ಕಾಗಿ ಅವರ ಹಂಬಲ ಮತ್ತು ತಪಸ್ಸು, ಮಹಾವೇದಾಂತಿ ತೋತಾಪುರಿಯ ದಿಗ್ದರ್ಶನದಲ್ಲಿ ನಡೆದ ಅವರ ಅದ್ವೈತ ಸಾಧನೆ, ಭೈರವಿ ಬ್ರಾಹ್ಮಣಿಯ ಮಾರ್ಗದರ್ಶನದಲ್ಲಿ ಅವರು ನಡೆಸಿದ ವಿವಿಧ ತಾಂತ್ರಿಕ ಸಾಧನೆಗಳು, ಸೂಫಿ ಸಾಧಕನ ನಿರ್ದೇಶನದಲ್ಲಿ ಇಸ್ಲಾಂ ಸಾಧನೆ, ಕ್ರಿಸ್ತದರ್ಶನ – ಹೀಗೆ ಎಲ್ಲ ಸಾಕ್ಷಾತ್ಕಾರದ ವಾಹಿನಿಗಳು ಅವರ ಹೃದಯದಲ್ಲಿ ಸಮ್ಮಿಳಿತವಾಗಿದ್ದವು. ಭಗವಂತನನ್ನು ಪಡೆಯಲು ಸಾಮಾನ್ಯ ಸಾಧಕನೊಬ್ಬನು ಒಂದು ಭಾವವನ್ನು ಆಶ್ರಯಿಸಿ ಅತ್ಯಂತ ಶ್ರದ್ಧೆ ಮತ್ತು ಏಕಾಗ್ರತೆಯಿಂದ ಸಾಧನೆ ಮಾಡಿದರೆ, ಒಂದೆರಡು ಜನ್ಮಗಳ ಕೊನೆಗೆ ಆ ಭಾವದಲ್ಲಿ ಪರಿಪೂರ್ಣತೆ ಪಡೆಯಲು ಸಾಧ್ಯವೆಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ. ಪರಮಹಂಸರು ತಮ್ಮ ಶರೀರವನ್ನು ತೋರಿಸಿ "ಇಲ್ಲಿ ಅಂಥ ಹದಿನೆಂಟು ಭಾವಗಳ ಪೂರ್ಣ ಪ್ರಕಾಶವಿದೆ" ಎಂದಿದ್ದರು; "ಇಲ್ಲಿಯ ಅನುಭವ ವೇದ ವೇದಾಂತಗಳ ಅನುಭವವನ್ನೂ ದಾಟಿದೆ" ಎನ್ನುತ್ತಿದ್ದರು. ಇಂಥ ಅಪೂರ್ವ ಆಧ್ಯಾತ್ಮಿಕ ಅನುಭವಗಳ ಬಲದಿಂದ ಸನಾತನ ಧರ್ಮದ ವಿವಿಧ ಪಥಗಳಲ್ಲಿ, ಸಾಕಾರ ನಿರಾಕಾರಗಳಲ್ಲಿ, ಜ್ಞಾನ ಭಕ್ತಿಗಳಲ್ಲಿ, ವಿಭಿನ್ನ ಮತಧರ್ಮಗಳ ಸಾಧನೆ ಸಿದ್ಧಿಗಳಲ್ಲಿ ಅತ್ಯಂತ ಹೃದಯಂಗಮವಾದ ಸಮನ್ವಯವನ್ನು ಅವರು ಸಾರಿದರು. ಶಿವಜ್ಞಾನದಿಂದ ಜೀವಸೇವೆಯ ವಿಧಾನವನ್ನೂ ಬೋಧಿಸಿದರು.

> **ಇತರ ಸಂತರು ಭಗವಂತನ ಒಂದು ಮುಖವನ್ನು ಅನುಭವಿಸಿದ್ದರೆ, ಶ್ರೀರಾಮಕೃಷ್ಣರು ಅವನನ್ನು ಅನಂತ ವೈವಿಧ್ಯದ ಹಿಂದಿರುವ ಸೀಮಾತೀತ ಏಕತೆಯಾಗಿ ಅನುಭವಿಸಿದರು. ಹಿಂದೆ ಆಗಿಹೋದ ಲಕ್ಷಾಂತರ ಸಂತರ ಆಧ್ಯಾತ್ಮಿಕ ಅನುಭವಗಳು ಶ್ರೀರಾಮಕೃಷ್ಣರಲ್ಲಿ ಏಕೀಭವಿಸಿ, ನವ್ಯತೆಯನ್ನು ಪಡೆದವು. ಹಿಂದೂಧರ್ಮವು ನೀಡಬೇಕಾದ ಕೊನೆಯ ಸಂದೇಶವನ್ನು ಅವರು ಭಾರತಕ್ಕೆ ಕೊಟ್ಟು ಹೋದರು.**
>
> –ಶ್ರೀಅರವಿಂದರು

ವಿಜ್ಞಾನದ ಅಪಾರ ಅನ್ವೇಷಣೆಗಳ ಬೆಳಕಿನಲ್ಲಿ, ಇಂದ್ರಿಯ ಪರಾಯಣತೆಯನ್ನು ಬೋಧಿಸುವ ಜಡವಾದದ ಪ್ರಾಬಲ್ಯದ ಈ ದಿನಗಳಲ್ಲಿ, 'ಧರ್ಮವು ಅರ್ಥಹೀನ, ವ್ಯರ್ಥ ನಂಬಿಕೆಗಳ ಕಂತೆ' ಎನ್ನುವ ಭಾವನೆ ಆಧುನಿಕರ ಮನಸ್ಸನ್ನು ಹೊಕ್ಕಂತಿದೆ. ಇನ್ನೊಂದೆಡೆ ಮನುಷ್ಯರ ಒಳಿತಿಗಾಗಿ ಹೊರಟ ಧರ್ಮ ನಿತ್ಯಜೀವನದಲ್ಲಿ ಶಾಂತಿ ಮತ್ತು ಬೆಳಕಿನೆಡೆಗೆ ಮಾರ್ಗ ತೋರುವ ಬದಲು, ನೂರಾರು ಮತಭೇದಗಳಿಂದ ದ್ವೇಷಾಸೂಯೆಗಳನ್ನು ಬೆಳೆಸಿಕೊಂಡು ಚಿತ್ರವಿಚಿತ್ರ ಆಚರಣೆಗಳಿಂದ ಕೂಡಿ ದಿಗ್ಭ್ರಮೆ ಹುಟ್ಟಿಸುವಂತೆ ಬೆಳೆದು ನಿಂತಿದೆ. ಇಂಥ ಸಂಧಿಕಾಲದಲ್ಲಿ ಭಗವಾನ್ ಶ್ರೀರಾಮಕೃಷ್ಣರ ಜೀವನೋಪದೇಶಗಳ ಮನನ ನಿಜವಾದ ಧಾರ್ಮಿಕ ಜೀವನದ ನಿರ್ದೇಶನದೊಂದಿಗೆ ಶಾಂತಿ, ಸಮಾಧಾನಗಳನ್ನು ತರುವುದರಲ್ಲಿ ಸಂದೇಹವಿಲ್ಲ.